**ಓ ಎಸ್ ನಂಃ 300-18**
**ಪಿ ಡಬ್ಲ್ಯೂ ಃ 1**

**ದಿಃ 13-04-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದ**

ದಾವಾ ಆಸ್ತಿ ಪ್ರತಿವಾದಿಗಳಿಗೆ ಹೇಗೆ ಬಂದಿರುತ್ತದೆ ನನಗೆ ಗೊತ್ತಿದೆ. ನಿಪಿ 1 ಆಗುವಾಗ ದಾವಾ ಆಸ್ತಿಯ ಖಾತಾ ಯಾರ ಹೆಸರಿನಲ್ಲಿತ್ತು ನಾನು ನೋಡಿಲ್ಲ ಆದರೆ ಪ್ರತಿವಾದಿಗಳು ತಮ್ಮ ಹೆಸರಿಗೆ ಮಾಡಿಸುವುದಾಗಿ ಹೇಳಿದ್ದರು. ದಾವಾ ಆಸ್ತಿಯ ಬಗ್ಗೆ ಬೇರೆ ಯಾವುದಾದರೂ ದಾಖಲೆಗಳನ್ನು ನೋಡಿದ್ದೀರಾ ಎಂದರೆ ದಾನ ಪತ್ರದ ಮೂಲಕ ತಾಯಿಯಿಂದ ಮಕ್ಕಳಿಗೆ ಬಂದಿರುತ್ತದೆ ಎಂದು ಹೇಳುತ್ತಾರೆ. ನಿಪಿ 1 ಆಗುವಾಗ ದಾವಾ ಆಸ್ತಿಯ ಸ್ವಾಧೀನತೆಯನ್ನು ಪ್ರತಿವಾದಿಗಳ ತಾಯಿ ಹೊಂದಿದ್ದರು. ನಿಪಿ 1 ಕ್ಕೆ ಪ್ರತಿವಾದಿಗಳ ತಾಯಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ನಿಪಿ 1 ಕ್ಕೆ ಪ್ರತಿವಾದಿಗಳ ತಾಯಿಯ ಸಹಿಯನ್ನು ಸಾಕ್ಷಿಯಾಗಿ ಪಡೆದಿರುವುದಿಲ್ಲ. 2 ನೇ ಪ್ರತಿವಾದಿಯ ಗಂಡ ಶಿವಲಿಂಗಯ್ಯ ಮತ್ತು ನಾನು ಒಂದೇ ಊರಿನವರಾಗಿರುತ್ತೇವೆ ಎಂದರೆ ನಿಜ. 2 ನೇ ಪ್ರತಿವಾದಿಯ ಗಂಡ ಶಿವಲಿಂಗಯ್ಯರವರ ತಂದೆ ನನಗೆ ಒಳ್ಳೆಯ ಪರಿಚಯ ಎಂದರೆ ಒಂದೇ ಊರಿನವರಾಗಿದ್ದು ಪರಿಚಯ ಇರುತ್ತದೆ ಎಂದು ಹೇಳುತ್ತಾರೆ. 2 ನೇ ಪ್ರತಿವಾದಿಯ ಗಂಡನಿಗೆ ಹಣದ ಅವಶ್ಯಕತೆ ಇದ್ದಿದ್ದರಿಂದ ಶಿವಲಿಂಗಯ್ಯರವರ ತಂದೆಯ ಮೂಲಕ ನನಗೆ ಹಾಗೂ ಶಿವಲಿಂಗಯ್ಯರವರ ಪರಿಚಯ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮತ್ತು ಶಿವಲಿಂಗಯ್ಯರವರ ಪರಿಚಯ ಆದ ನಂತರ ಶಿವಲಿಂಗಯ್ಯರವರ ಹಣದ ಸಮಸ್ಯೆಗೆ ನನ್ನ ಕಡೆ ಬಂದು ಹಣ ಕೇಳಿದ್ದರು ಎಂದರೆ ಸರಿಯಲ್ಲ. ಶಿವಲಿಂಗಯ್ಯರವರು ಹಣ ಕೇಳಲು ನನ್ನ ಕಡೆ ಬಂದಿದ್ದು ನನಗೆ ಶಿವಲಿಂಗಯ್ಯರವರ ತಂದೆ ಚೆನ್ನಾಗಿ ಪರಿಚಯ ಇದ್ದಿದ್ದರಿಂದ ನಾನು ಶಿವಲಿಂಗಯ್ಯರವರಿಗೆ ಹಣ ಕೊಡಲು ಒಪ್ಪಿ ದಾವಾ ಆಸ್ತಿಯನ್ನು ಅಡ ಮಾಡಬೇಕು ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ಶಿವಲಿಂಗಯ್ಯರವರಿಗೆ ಹಣದ ಅವಶ್ಯಕತೆ ತುಂಬಾ ಇದ್ದಿದ್ದರಿಂದ ಅವರು ತಮ್ಮ ಹೆಂಡತಿ ಕಡೆಯಿಂದ ನನ್ನ ಹೆಸರಿಗೆ ಸಾಲದ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 1 ರ ದಿನಾಂಕ ನನಗೆ ನೆನಪಿಲ್ಲ. ನಿಪಿ 1 ರ ಛಾಪಾ ಕಾಗದವನ್ನು ಶಿವಲಿಂಗಯ್ಯ ಮತ್ತು ಪ್ರತಿವಾದಿಗಳು ತಂದಿರುತ್ತಾರೆ ಎಂದು ಹೇಳುತ್ತಾರೆ. ನಿಪಿ 1 ರ ಮಾತುಕತೆ ಶಿವಲಿಂಗಯ್ಯ, ಪ್ರತಿವಾದಿಗಳು ನಾನು ಮತ್ತು ಒಬ್ಬ ಬಸವರಾಜ್ ಇವರ ಮಧ್ಯೆ ನಡೆದಿರುತ್ತದೆ. ದಾವಾ ಆಸ್ತಿಗೆ ಹಾಗೂ ಶಿವಲಿಂಗಯ್ಯ ಮತ್ತು ಬಸವರಾಜ್ ರವರಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಶಿವಲಿಂಗಯ್ಯರವರು ಸಂಬಂದಿಸಿದ್ದು ಬಸವರಾಜ್ ಸಂಬಂದಿಸಿಲ್ಲ ಎಂದು

ಹೇಳುತ್ತಾರೆ. ನಿಪಿ 1 ಕ್ಕೆ ಶಿವಲಿಂಗಯ್ಯರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಿಜ. ನನ್ನ ಮತ್ತು ಶಿವಲಿಂಗಯ್ಯರವರ ಮದ್ಯೆ ಸಾಲದ ವ್ಯವಹಾರ ನಡೆದಿದ್ದರಿಂದ ಶಿವಲಿಂಗಯ್ಯರವರು ನಿಪಿ 1 ಕ್ಕೆ ಛಾಪಾ ಕಾಗದವನ್ನು ತಂದಿದ್ದರು ಎಂದರೆ ಸರಿಯಲ್ಲ. ನಿಪಿ 1 ಕ್ಕೆ ಮಾಹಿತಿಯನ್ನು ಸ್ಟಾಂಪ್ ವೆಂಡರ್ ಕೊಟ್ಟಿರುತ್ತಾರೆ. ನಿಪಿ 1 ಆಗುವಾಗ ನಾನು, ಶಿವಲಿಂಗಯ್ಯ ಬಸವರಾಜು ಮತ್ತು ಪ್ರತಿವಾದಿಗಳು ಹಾಜರಿದ್ದೆವು. ನಿಪಿ 1 ಆಗುವಾಗ ನಾನು ಮತ್ತು ಬಸವರಾಜ್ ಇಬ್ಬರೇ ಸ್ಥಳದಲ್ಲಿ ಹಾಜರಿದ್ದು ಪ್ರತಿವಾದಿಗಳು ಹಾಜರಿರಲಿಲ್ಲ ಆದ ಕಾರಣ ನಿಪಿ 1 ರ ವಿಷಯ ಪ್ರತಿವಾದಿಗಳಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ 1 ಆಗುವಾಗ ಎಷ್ಟು ಸಮಯ ಆಗಿತ್ತು ನೆನಪಿಲ್ಲ. ನಿಪಿ 1 ನೊಂದಣಿಯಾಗುವಾಗ ಸಾಯಂಕಾಲ ಆಗಿದ್ದು ಸಮಯ ಗೊತ್ತಿಲ್ಲ. ನಿಪಿ 1 ನೊಂದಣಿಯಾಗುವಾಗ ಸಾಯಂಕಾಲ ಆಗಿತ್ತು ಎಂದರೆ ನೊಂದಣಿ ಕಛೇರಿ ಮುಚ್ಚುವ ಸಮಯ ಆಗಿತ್ತ ಎಂದರೆ ಇಲ್ಲ ಎಂದು ಹೇಳುತ್ತಾರೆ. ನಿಪಿ 1 ರ ಯಾವುದೇ ವಿಷಯವನ್ನು ಪ್ರತಿವಾದಿಗಳಿಗೆ ನಾನು ತಿಳಿಸಿಲ್ಲ ಎಂದರೆ ಸರಿಯಲ್ಲ. ನಿಪಿ 1 ನೊಂದಣಿಯಾಗುವಾಗ ಕಛೇರಿ ಮುಚ್ಚುವ ಸಮಯ ಆಗಿದ್ದು ತರಾತುರಿಯಲ್ಲಿ ನಿಪಿ 1 ರ ನೊಂದಣಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ 1 ಕ್ಕೆ ಶಿವಲಿಂಗಯ್ಯರವರ ಸಹಿಯನ್ನು ಅವರು ನನ್ನ ಕಡೆಯಿಂದ ಸಾಲ ಪಡೆದಿದ್ದಕ್ಕೆ ಸಾಲ ಪತ್ರ ಎಂದು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

ನಾನು ಪ್ರತಿವಾದಿಗಳಿಗೆ 12 ಲಕ್ಷ ರೂ ಹಣವನ್ನು ಕೊಟ್ಟಿದ್ದು 10 ಲಕ್ಷ ರೂಗಳನ್ನು ಚೆಕ್ ಮೂಲಕ ಮತ್ತು 2 ಲಕ್ಷ ರೂಗಳನ್ನು ನಗದಿನ ಮೂಲಕ ಕೊಟ್ಟಿರುತ್ತೇನೆ. ನಾನು ಚೆಕ್ ನ್ನು 1 ನೇ ಪ್ರತಿವಾದಿ ಹೇಳಿದ್ದರ ಮೇರೆಗೆ 2 ನೇ ಪ್ರತಿವಾದಿಯ ಹೆಸರಿಗೆ ಬರೆದುಕೊಟ್ಟಿರುತ್ತೇನೆ. ನನ್ನ ಮತ್ತು ಶಿವಲಿಂಗಯ್ಯರವರ ಮದ್ಯೆ ವ್ಯವಹಾರ ಆಗಿದ್ದರಿಂದ ಚೆಕ್ಕನ್ನು ಶಿವಲಿಂಗಯ್ಯರವರ ಹೆಂಡತಿಯಾದ 2 ನೇ ಪ್ರತಿವಾದಿಯ ಹೆಸರಿಗೆ ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ 1 ರ ಮುಂಗಡ ಹಣವನ್ನು 2 ನೇ ಪ್ರತಿವಾದಿಗೆ ಕೊಟ್ಟಿರುವ ಬಗ್ಗೆ ನಿಪಿ1 ರಲ್ಲಿ ಬರೆದಿಲ್ಲ ಎಂದರೆ ನಿಜ. ನಾನು 2 ನೇ ಪ್ರತಿವಾದಿಗೆ ಯಾವ ದಿನಾಂಕದ ಚೆಕ್ ಕೊಟ್ಟಿರುತ್ತೇನೆ ನೆನಪಿಲ್ಲ. ನಿಪಿ 1 ಆಗಿದ್ದು ದಿನಾಂಕಃ 30-11-2017 ಎಂದರೆ ನಿಜ. ನಾನು ಹಾಜರುಪಡಿಸಿದ ನಿಪಿ 7 ಮತ್ತು 8 ರ ಪ್ರಕಾರ ದಿನಾಂಕಃ 30-11-2017 ಕ್ಕೆ ಮುಂಗಡ ಹಣದ ಮೊತ್ತ ನನ್ನ ಬ್ಯಾಂಕ್ ಖಾತೆಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಾನು ದಿನಾಂಕಃ 02-12-2017 ರ ಕೊಟ್ಟ ಚೆಕ್ ಬ್ಯಾಂಕ್ ಖಾತೆಯಲ್ಲಿ ಹಣ ಇಲ್ಲ ಎಂದು ವಾಪಸ್ ಬಂದಿರುತ್ತದೆ ಎಂದರೆ ಸರಿಯಲ್ಲ. ನಾನು 2 ನೇ ಪ್ರತಿವಾದಿಗೆ ಕೊಟ್ಟ ಚೆಕ್ ಕಾರ್ಪೋರೇಷನ್ ಬ್ಯಾಂಕಿಗೆ ಸಂಬಂದಿಸಿರುತ್ತದೆ. ಕಾರ್ಪೋರೇಷನ್ ಬ್ಯಾಂಕ್ ಖಾತೆ ನನ್ನ ಮತ್ತು ನನ್ನ ಹೆಂಡತಿಯ ಹೆಸರಿನಲ್ಲಿರುತ್ತದೆಲ. ಸದರಿ ಬ್ಯಾಂಕಿನ ಖಾತೆ ನಂಬರ್ ನನಗೆ ನೆನಪಿಲ್ಲ.

ನಿಪಿ 7 ಮತ್ತು 8 ರ ಪ್ರಕಾರ ನನ್ನ ಮತ್ತು ನನ್ನ ಹೆಂಡತಿಯ ಬ್ಯಾಂಕ್ ಖಾತೆ ಜಂಟಿಯಾಗಿರುವುದಿಲ್ಲ ಎಂದರೆ ನನ್ನ ಮತ್ತು ನನ್ನ ಹೆಂಡತಿಯ ಬ್ಯಾಂಕ್ ಖಾತೆ ಪ್ರತ್ಯೇಕವಾಗಿರುತ್ತದೆ

ಎಂದು ಹೇಳುತ್ತಾರೆ. ನನ್ನ ಹೆಂಡತಿಯ ಬ್ಯಾಂಕ್ ಖಾತೆಯ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ಈ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 7 ಮತ್ತು 8 ನನ್ನ ಹೆಸರಿನಲ್ಲಿರುತ್ತದೆ ಎಂದರೆ ನೋಡಿ ಹೇಳಬಹುದು ಎಂದು ಹೇಳುತ್ತಾರೆ. ನಿಪಿ 7 ಮತ್ತು 8 ನನ್ನ ಬ್ಯಾಂಕ್ ಖಾತೆಯ ಪುಸ್ತಕಗಳು ಎಂದರೆ ಇರಬಹುದು. ಮುಂದಿನ ದಿನಾಂಕದಲ್ಲಿ ನನ್ನ ಹೆಂಡತಿಯ ಬ್ಯಾಂಕ್ ಖಾತೆ ಪುಸ್ತಕವನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ ಎಂದರೆ ನಿಜ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**